ದಾಖಲಿಸುತ್ತಾರೆ.

ಇವರುಗಳ ಯೌವನ ಮತ್ತು ಒಲವುಗಳು ರೂಪುಗೊಂಡ ರೀತಿಯಿಂದ, ಅವರ ಜೀವನದಲ್ಲಿ ಎಲ್ಲೂ ನಮಗೆ ತೀವ್ರ ಎಡಪಂಥೀಯ ವಿಚಾರಧಾರೆ, ಹಿಂಸೆ, ಪಿತೂರಿಗಳು ಕಾಣುವುದಿಲ್ಲ. ಗೌತಮ್ ನವಲಖಾ ಅಥವಾ ವರವರರಾವು ಅವರುಗಳ ವಿಚಾರಧಾರೆಯಲ್ಲಿ ಎಡಪಂಥೀಯತೆ ಕಂಡರೂ ಹಿಂಸೆಯ ಒಲವು ಕಾಣುವುದಿಲ್ಲ. ಈ ಹದಿನಾರು ಜನ ಕೂಡಿ ಕೆಲಸ ಮಾಡುವ, ಪರಿಚಿತರಾಗುವ, ಪಿತೂರಿ ಹೂಡುವ ಪರಿಸ್ಥಿತಿ ಬರಲು ಸಾಧ್ಯವೇ ಇಲ್ಲ ಎನ್ನುವುದನ್ನು ಅಲ್ಪಾ ಸಾಂದರ್ಭಿಕವಾಗಿ ನಿರೂಪಿಸುತ್ತಾರೆ.

ಕಾರ್ಮಿಕ ಹಕ್ಕು ಮತ್ತು ಮಾನವಾಧಿಕಾರಗಳ ಬಗ್ಗೆ ಸುಧಾ ನ್ಯಾಯಾಲಯದ ಮೂಲಕವೇ ಹೋರಾಡುತ್ತಾರೆ. ಆ ಹೋರಾಟವೂ ಕಷ್ಟದ್ದು ಮತ್ತು ಸ್ಪಷ್ಟ ಗೆಲುವೂ ಇಲ್ಲ. ಉದಾಹರಣೆಗೆ, ಸುಧಾ ತಮ್ಮ ಸಹಯೋಗಿಯೊಬ್ಬ ಹೇಳಿದ ಮಾತನ್ನು ಉಲ್ಲೇಖಿಸುತ್ತಾರೆ: “ನಮಗೆ ನ್ಯಾಯಾಲಯ ಕಬಡ್ಡಿಯ ಕಣವಿದ್ದಂತೆ. ಅಲ್ಲಿ ಪ್ರವೇಶಿಸಿ ಒಬ್ಬರನ್ನು ಬಚಾಯಿಸಿ ತರುತ್ತಿರುವಾಗ ನಾವು ಅಲ್ಲಿ ಬಂಧಿತರಾಗಬಾರದು, ಇದು ಒಬ್ಬೊಬ್ಬರನ್ನೇ ಹೆಕ್ಕಿ ತರುವ ನಿರಂತರ ಪ್ರಕ್ರಿಯೆ” – ದೊಡ್ಡ ಪಟ್ಟಭದ್ರ ಹಿತಾಸಕ್ತಿಗಳ ವಿರುದ್ಧ ನಡೆಸುವ ಈ ಸಮರ, ನಿರಂತರವಾದದ್ದು.

ಸ್ಟಾನ್ ಸ್ವಾಮಿ ಜಾರ್ಖಂಡಿನಲ್ಲಿ ತಮ್ಮ ಕೆಲಸದಲ್ಲಿ ನಿರತರಾಗಿದ್ದು – ಭೀಮಾ ಕೋರೆಗಾಂವ್ ಹೆಸರನ್ನೂ, ಪ್ರಕರಣವನ್ನೂ ಕೇಳಿಯೇ ಇಲ್ಲ. ಆದರೂ ಸರ್ಕಾರ ಅವರನ್ನು ಆ ಕಾಂಡದಲ್ಲಿ ಆಪಾದಿತರನ್ನಾಗಿಸಿ ಬಂಧಿಸುತ್ತದೆ. ನ್ಯಾಯ ಸಿಗುವ ಮೊದಲೇ ಸ್ಟಾನ್ ಕಾರಾಗೃಹದಲ್ಲೇ ಅಸುನೀಗುತ್ತಾರೆ. ತೇಲ್ತುಂಬ್ಡೆ ಬುದ್ಧಿಜೀವಿ. ಚಿಂತಕ. ಬರವಣಿಗೆಯೇ ಅವರ ಬದುಕು. ಅವರನ್ನೂ ಬಂಧಿಸಲಾಗುತ್ತದೆ. ಹಾಗೇ ಮಿಕ್ಕವರೂ ಕೂಡಾ.

ಅಲ್ಪಾ ಈ ರೀತಿಯಾಗಿ ‘ಬಿಕೆ-16’ ಜನರ ಚಿತ್ರಣ ನೀಡುತ್ತಾ, ಅವರುಗಳ ಜೀವನವನ್ನು ಕಟ್ಟಿಕೊಡುತ್ತಾ ಸೂಕ್ಷ್ಮವಾಗಿ ಅವರುಗಳ ಮೇಲೆ ಹೇರಿರುವ ಅಪಾದನೆಯ ಟೊಳ್ಳು ಮತ್ತು ಕಪಟವನ್ನು ಬಿಡಿಸಲು ಪ್ರಯತ್ನಿಸುತ್ತಾರೆ. ಮೊದಲ ಭಾಗದಲ್ಲಿ ಸಾಂದರ್ಭಿಕವಾಗಿ ಈ ಆಪಾದನೆಗಳು ತಪ್ಪು ಎನ್ನುವುದನ್ನು ಜೀವನ ಚರಿತ್ರೆ ಮತ್ತು ಅವರುಗಳು ಮಾಡುತ್ತಿದ್ದ ಕೆಲಸದ ಸಂದರ್ಭದಿಂದ ನಿರೂಪಿಸಲು ಪ್ರಯತ್ನಿಸಿದರೆ, ಪುಸ್ತಕದ ಎರಡನೇ ಭಾಗಕ್ಕೆ ಬರುವ ವೇಳೆಗೆ ಅಲ್ಪಾ ಪತ್ರಕರ್ತರ ಪಾತ್ರವನ್ನು ಧರಿಸುತ್ತಾರೆ.

ಎರಡನೇ ಭಾಗದಲ್ಲಿ ನೇರವಾಗಿ ಈ ಪ್ರಕರಣದ ಒಳಹೊಕ್ಕು ಅದರ ಪದರಗಳನ್ನು ಬಿಡಿಸಿ ನೋಡುತ್ತಾರೆ. ಆಪಾದಿತರ ಹಿನ್ನೆಲೆ, ಅವರ ಬಂಧನದ ಸಂದರ್ಭ, ಅವರ ಮೇಲಿರುವ ಆಪಾದನೆಗಳು, ದಾಖಲೆಗಳು, ಎಲ್ಲವನ್ನೂ ಪರಿಗಣಿಸಿದಾಗ ಇದರಲ್ಲಿ ಸರ್ಕಾರವೇ ಮರುಪಿತೂರಿ ಹೂಡಿ ಅವರನ್ನೆಲ್ಲ ಆಪಾದಿತರನ್ನಾಗಿ ಮಾಡಿರಬಹುದು ಎನ್ನುವ ಕುರುಹು ಸಿಗುತ್ತದೆ. ಈ ಹದಿನಾರು ಜನರನ್ನು ಒಂದು ಪಿತೂರಿಯಲ್ಲಿ ಸಹಭಾಗಿಗಳೆಂದು ನಿರೂಪಿಸುವುದಕ್ಕೆ ಸರ್ಕಾರದ ಯಂತ್ರಾಂಗ ಕಂಪ್ಯೂಟರುಗಳನ್ನು ಹ್ಯಾಕ್ ಮಾಡಿ, ಕೆಲವು ದಸ್ತಾವೇಜುಗಳನ್ನು ಸೇರಿಸಿದ ಮತ್ತು ಅದರ ಬಗ್ಗೆ ತನಿಖೆ ನಡೆಸಿದ ಅಮೆರಿಕದ ಮತ್ತು ಕೆನಡಾದ ತಂತ್ರಜ್ಞರೊಂದಿಗೆ ಮಾತನಾಡಿ ಆ ಕಥೆಯ ಎಲ್ಲ ಬಿಂದುಗಳನ್ನೂ ಸೇರಿಸುತ್ತಾರೆ. ಅಲ್ಪಾರ ಈ ಅಧ್ಯಯನದಿಂದ ಈ ಹದಿನಾರು ಜನರ ಮೇಲೆ ಹೂಡಿರುವ ಆರೋಪ ನಿಜವಲ್ಲ ಎಂದು ನಂಬಲು ಪ್ರೇರಣೆ ಸಿಗುತ್ತದೆ.

ಆದೇ ಅಧಿಕಾರಿಗಳಿಂದ ಈ ಕೇಸನ್ನು ತೀವ್ರಗತಿಯಲ್ಲಿ ಮುಕ್ತಾಯದೆಡೆಗೆ ಒಯ್ಯುವ ಯಾವ ತುರ್ತೂ ಕಾಣುವುದಿಲ್ಲ. ನ್ಯಾಯಿಕ ಪ್ರಕ್ರಿಯೆಯೇ ಒಂದು ದಂಡನೆಯಾಗಿ ನಮಗೆ ಕಾಣುತ್ತದೆ. ಹಲವು ವರ್ಷಗಳ ಹಿಂದೆ ನಡೆದ ಈ ಪ್ರಕರಣದಲ್ಲಿ ಆಪಾದಿತರು ಇನ್ನೂ ಆಪಾದಿತರಾಗಿಯೇ ಐದಾರು ವರ್ಷ ಜೈಲಿನಲ್ಲಿ ಜೀವನವನ್ನು ಕಳೆದಿದ್ದಾರೆ. ಜಾಮೀನಿನ ಮೇಲೆ ಹೊರಬಂದವರಿಗೂ ತಮ್ಮ ಸಾಮಾನ್ಯ ಜೀವನ ನಡೆಸಲು, ಮಾತನಾಡಲು ದಿಗ್ಬಂಧನವಿದೆ. ಭೌತಿಕ ಸ್ವಾತಂತ್ರ್ಯ ಮತ್ತು ಕಾಯಕ – ಮಾತಾಡುವ, ಹೋರಾಡುವ ಸ್ವಾತಂತ್ರ್ಯ ಎರಡೂ ಹರಣವಾಗಿದೆ.

ಜಾಮೀನು ಸಿಗುವುದು ಸಾಧ್ಯವೇ ಇಲ್ಲದಂತಹ ತೀವ್ರವಾದಿಗಳ ಮೇಲೆ ಉಪಯೋಗಿಸುವ ಕಾನೂನನ್ನು ಮಾನವಾಧಿಕಾರಗಳ ಪರವಾಗಿ ಕೆಲಸ ಮಾಡುವ ಜನರ ಮೇಲೆ ಉಪಯೋಗಿಸುವುದು